ಎನ್ನುವುದೇ ಗೊತ್ತಾಗುತ್ತಿರಲಿಲ್ಲ. ಅವುಗಳನ್ನು ಅರ್ಥಮಾಡಿಕೊಳ್ಳುವಾಗ, ಹಿಂದಿಯಲ್ಲಿರುವ ಅನುವಾದ, ಇಡೀ ಕಾವ್ಯದ ಇಂಗ್ಲಿಷ್ ಅನುವಾದ ಇತ್ಯಾದಿಗಳ ನೆರವು ಪಡೆಯಬೇಕಾಯಿತು.

**4. ಪ್ರಾಚೀನ ಪದಗಳು:**

ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯದ ಕಾಲದಲ್ಲಿ, ಮುಖ್ಯವಾಗಿ 14-15ನೆಯ ಶತಮಾನಗಳಲ್ಲಿ, ದೇಶ-ವಿದೇಶಗಳಿಂದ ವರ್ತಕರು, ಸೈನಿಕರು, ಶಿಲ್ಪಿಗಳು, ಮತ್ತು ಕಲಾವಿದರು, ವಿಜಯನಗರಕ್ಕೆ ಬಂದು ಅಲ್ಲಿಯೇ ನೆಲಸುತ್ತಿದ್ದರು. ಸಹಜವಾಗಿಯೇ ಅಂತಹವರ ಭಾಷೆಗಳ, ವಿಶೇಷವಾಗಿ ಅರೇಬಿಕ್, ಪರ್ಶಿಯನ್, ಮರಾಠಿ ಮತ್ತು ತೆಲುಗು ಭಾಷೆಗಳ ಅನೇಕ ಪದಗಳು ಕನ್ನಡ ಪದಕೋಶವನ್ನು ಸೇರಿದವು. ಕುಮಾರವ್ಯಾಸನು ಆ ಕಾಲಘಟ್ಟದಲ್ಲಿದ್ದುದರಿಂದ, ಅವನು ಯಾವ ಮಡಿವಂತಿಕೆಯೂ ಇಲ್ಲದೆ, ತನ್ನ ಕಾಲದಲ್ಲಿ ಉಪಯೋಗಿಸುತ್ತಿದ್ದ ಎಲ್ಲಾ ಬಗೆಯ ಕನ್ನಡ ಪದಗಳನ್ನು ಉಪಯೋಗಿಸುತ್ತಾನೆ. ಇಂದು ಚಾಲ್ತಿಯಲ್ಲಿಲ್ಲದ ಅಂತಹ ಪದಗಳ ಅರ್ಥವನ್ನು ತಿಳಿದುಕೊಳ್ಳಲು ಪ್ರೊ. ವಿವೇಕ ರೈ, ಪ್ರೊ. ಹನೂರು ಕೃಷ್ಣಮೂರ್ತಿ, ಮುಂತಾದ ವಿದ್ವಾಂಸರ ನೆರವು ಪಡೆಯಬೇಕಾಯಿತು.

ಇಂತಹ ಅನುಭವಗಳು ಎಲ್ಲಾ ಅನುವಾದಕರಿಗೂ ಅನ್ವಯಿಸುವುದರಿಂದ, ಕೊನೆಯದಾಗಿ ಒಂದು ವಿಷಯವನ್ನು ಪ್ರಸ್ತಾಪಿಸಿ, ಈ ಲೇಖನವನ್ನು ಮುಗಿಸಬಹುದು. ಅನುವಾದಕನು ತಾನು ಅನುವಾದಿಸುವ ಕೃತಿಯನ್ನು ಪ್ರೀತಿಸದಿದ್ದರೆ, ಮೆಚ್ಚದಿದ್ದರೆ, ಅವನ ಅನುವಾದ ಯಾಂತ್ರಿಕವಾಗುತ್ತದೆ. ಆದರೆ, ಕುಮಾರವ್ಯಾಸನನ್ನು ಅನುವಾದಿಸುವಾಗ ಆ ಕಾರ್ಯವು ಎಷ್ಟು ಕಷ್ಟಕರವಾಗಿತ್ತೋ ಅಷ್ಟೇ ಸಂತೋಷವನ್ನೂ ಕೊಡುತ್ತಿತ್ತು. ಕಳೆದ 500 ವರ್ಷಗಳಿಂದ ಕುಮಾರವ್ಯಾಸನ ಕೃತಿಯು ಯಕ್ಷಗಾನ, ಗಮಕ ವಾಚನ, ಕಥೆ-ನಾಟಕ, ಇತ್ಯಾದಿ ಅನೇಕ ಮಾಧ್ಯಮಗಳ ಮೂಲಕ ಕರ್ನಾಟಕದ ಪಂಡಿತ-ಪಾಮರರನ್ನು ರಂಜಿಸಿದೆ.

'ರೂಪಕ ಚಕ್ರವರ್ತಿ' ಕುಮಾರವ್ಯಾಸನ ಕಾವ್ಯ ಶೈಲಿ ಎಷ್ಟು ಸುಭಗವೋ ಅದರ ವೈಚಾರಿಕತೆಯೂ ಅಷ್ಟೇ ಮಾನವೀಯವಾದುದು. ಅರ್ಜುನ, ಭೀಮ, ದ್ರೌಪದಿ, ಮುಂತಾದ ಪಾತ್ರಗಳನ್ನು ಕೇಂದ್ರದಲ್ಲಿಟ್ಟು, ಅವರ ದೃಷ್ಟಿಕೋನದಿಂದ ಮಹಾಭಾರತ ಕಥೆಯನ್ನು ನಿರೂಪಿಸುವ ಅನೇಕ ಮಹಾಭಾರತಗಳು ಕನ್ನಡದಲ್ಲಿ ಹಾಗೂ ಇತರ ಭಾಷೆಗಳಲ್ಲಿ ರಚನೆಗೊಂಡಿವೆ. ಆದರೆ, ಪ್ರಾಯಃ, ಕೃಷ್ಣ ಕೇಂದ್ರಿತ ಮಹಾಭಾರತವನ್ನು ರಚಿಸಿರುವವನು ಕುಮಾರವ್ಯಾಸನೊಬ್ಬನೇ ಎಂದು ತೋರುತ್ತದೆ. ಭಾಗವತ ಸಂಪ್ರದಾಯಕ್ಕೆ ಸೇರಿದ ಕುಮಾರವ್ಯಾಸನು ಪ್ರಾರಂಭದಲ್ಲಿಯೇ 'ತಿಳಿಯ ಹೇಳುವೆ ಕೃಷ್ಣ ಕಥೆಯನು' ಎಂದು ಘೋಷಿಸುತ್ತಾನೆ. ಆದುದರಿಂದಲೇ, ಕ್ಷತ್ರಿಯರ ಕಥೆಯನ್ನೇ ನಿರೂಪಿಸುವ ಕುಮಾರವ್ಯಾಸ ಕ್ಷತ್ರಿಯರನ್ನು ಹಾಗೂ ಕ್ಷಾತ್ರದ ವೈಭವೀಕರಣವನ್ನೂ ತಿರಸ್ಕರಿಸುತ್ತಾನೆ. 'ಆದಿಪರ್ವ'ದಲ್ಲಿ ಪಾಂಡು ಮಹಾರಾಜನು ಪರಮೋತ್ಸಾಹದಿಂದ ಬೇಟೆಗೆ ಹೊರಟಾಗ, 'ಏನನೆಂಬೆನು ನಿಮ್ಮನು ಪಿಶಾಚೋನ್ನೃಪಾಲಕರೆಂಬವೋಲ್...' ಎಂದು ವೈಶಂಪಾಯನನು ಜನಮೇಜಯನಿಗೆ ಹೇಳುತ್ತಾನೆ. 'ಸಭಾಪರ್ವ'ದ ಪ್ರಾರಂಭದಲ್ಲಿಯೇ ಬರುವ ನಾರದರ ಉಪದೇಶದಲ್ಲಿ ಒಂದು ಕಡೆ ಹೀಗೆ ಬರುತ್ತದೆ: 'ಅರಸು ರಾಕ್ಷಸ ಮಂತ್ರಿಯೆಂಬುವ/ ಮೊರೆವ ಹುಲಿ ಪರಿವಾರ ಹದ್ದಿನ/ ನೆರವಿ ಬಡವರ ಬಿನ್ನಪವ ನಿನ್ನಾರು ಕೇಳುವರು.' ಇಷ್ಟೇ ಅಲ್ಲದೆ, ದ್ರೌಪದಿ ಸ್ವಯಂವರದ ಸಂದರ್ಭದಲ್ಲಿ ಕಾವ್ಯವನ್ನು ಪ್ರವೇಶಿಸುವ ಕೃಷ್ಣ, ಅನಂತರ ಸಂಭವಿಸುವ ಎಲ್ಲಾ ಪ್ರಮುಖ ಘಟನೆಗಳಲ್ಲಿಯೂ ಮುಖ್ಯಪಾತ್ರವನ್ನು ವಹಿಸುತ್ತಾನೆ.

ಕನ್ನಡದ ಇಂತಹ ಶ್ರೇಷ್ಠ ಕಾವ್ಯವನ್ನು ಅನುವಾದಿಸುವುದು ಪ್ರೀತಿಯ ಕಾರ್ಯ, ಅಭಿಮಾನದ ಕಾರ್ಯ. ಈ ಕಾರ್ಯವನ್ನು ನಿರ್ವಹಿಸಲು ನನಗೆ ಅವಕಾಶವನ್ನು ಕಲ್ಪಿಸಿದ ಮುಖ್ಯ ಸಂಪಾದಕರಾದ ಡಾ. ಶ್ರೀಧರ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

●